ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ. 286/2022,

ಚಾಸಾ– 1, ಫ್ರಾಸಾ –1

| | |
|---|---|
| ಹೆಸರು | ಇಂಮ್ತಿಯಾಜ್ |
| ತಂದೆಯ ಹೆಸರು | ಯೂಸಫ್ |
| ವಯಸ್ಸು | 32 ವರ್ಷ |
| ಕೆಲಸ | ಆಟೋ ಚಾಲಕ |
| ವಾಸ | ಮಾರ್ಪಾಡಿ ಗ್ರಾಮ |
| ಪ್ರಮಾಣೀಕರಿಸಿದ ದಿನಾಂಕ | 17–10–2023 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಮೃತ ಬಾವು ಬ್ಯಾರಿ ನನ್ನ ಚಿಕ್ಕಪ್ಪ ದಿಃ 27–12–2021 ರಂದು ಬೆಳಿಗ್ಗೆ 9–45 ಗಂಟೆ ಸಮಯದಲ್ಲಿ ನಾನು ಮನೆಯಲ್ಲಿ ಇದ್ದಾಗ , ನನ್ನ ಸ್ನೇಹಿತ ನನಗೆ ಕೆರೆ ಮಾಡಿದ ನಿಮ್ಮ ಚಿಕ್ಕಪ್ಪನಿಗೆ ಅಪಘಾತವಾಗಿದೆ , ಆಳ್ವಾಸ್ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದಾರೆ ಎಂದು ತಿಳಿಸಿರುತ್ತಾರೆ . ಆಗ ನಾನು ಆಸ್ಪತ್ರೆಗೆ ಹೋಗಿರುತ್ತೇನೆ . ಅಲ್ಲಿ ಸಾರ್ವಜನಿಕರು ಇದ್ದರು . ಸದರಿಯವರಿಗೆ ಚಿಕಿತ್ಸೆಯನ್ನು ನೀಡುತ್ತಿದ್ದೇವೆ ಎಂದು ವೈದ್ಯರು ತಿಳಿಸಿರುತ್ತಾರೆ . ಸದರಿಯವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ . ಆ ನಂತರ ವೈದ್ಯರು ಅವರು ಕೋಮಾ ಸ್ಥಿತಿಗೆ ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ .

2. ಅಲ್ಲಿದ್ದ ಸಾರ್ವಜನಿಕರ ಬಳಿ ಏನಾಯಿತು ಎಂದು ಕೇಳಿದಾಗ , ಪೊಲೀಸ್ ವಾಹನ ಬಂದು ಅವರಿಗೆ ಡಿಕ್ಕಿ ಪಡಿಸುತ್ತದೇ ಎಂದು ತಿಳಿಸಿರುತ್ತಾರೆ . ಮೃತ ನನ್ನ ಚಿಕ್ಕಪ್ಪ ತನ್ನ ದ್ವಿಚಕ್ರವಾಹನದಲ್ಲ ಮೂಡಬಿದ್ರೆಯಿಂದ ಹಂಡೇಲು ಕಡೆಗೆ ಹೋಗುತ್ತಿರುವಾಗ ವಿದ್ಯಾಗಿರಿಯ ಆಟೋ ಪಾರ್ಕಿನ ಬಳಿ

ಸದರಿ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ . ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ನಾವು ಎ.ಜೆ ಅಸ್ಪತ್ರಗೆ ಕರೆದುಕೊಂಡು ಹೋಗಿರುತ್ತೇವೆ . ನಂತರ ಫದಾರ್ ಮುಲ್ಲರ್ ಅಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ . ಅಲ್ಲಿ ಅವರು 25 ದಿನಗಳ ಕಾಲ ಇದ್ದು , ಚಿಕಿತ್ಸೆ ಫಲಕಾರಿಯಾಗುವುದಿಲ್ಲ ಎಂದು ಹೇಳಿದ ಮೇರೆಗೆ ನಾವು ಮನೆಗೆ ಕರೆದುಕೊಂಡು ಬಂದಿರುತ್ತೇವೆ. 3 ತಿಂಗಳು ಕೋಮಾ ಸ್ಥಿತಿಯಲ್ಲಿಯೇ ಇದ್ದರು . ಆ ನಂತರ ಅವರು ದಿಃ 24-04-2022 ರಂದು ಅವರು ಸರ್ಕಾರಿ ಆಸ್ಪತ್ರೆಯಲ್ಲಿ ಮೃಟ್ಟಿರುತ್ತಾರೆ . ನಂತರ ಮೃತರ ಶವಪಂಚನಾಮೆಯನ್ನು ಮಾಡಿರುತ್ತಾರೆ. ಅಪಘಾತವಾದ ಸ್ಥಳದಲ್ಲಿ ಗಾಡಿಯ ಬಿಡಿ ಭಾಗಗಳು ಇದ್ದು, ರಕ್ತ ಅಲ್ಲಿ ಚೆಲ್ಲಿತ್ತು .

3. ಈ ಬಗ್ಗೆ ನಾನು ದೂರನ್ನು ದಾಖಲು ಮಾಡಿದ್ದು , ಸದರಿ ದೂರನ್ನು ಈಗ ನೋಡುತ್ತಿದ್ದು , ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು, ಅಪಘಾತ ಪಡಿಸಿದವರು ಯಾರು ಎಂದು ತಿಳಿದುಕೊಂಡಿರುತ್ತೇನೆ . ಅವರು ಪೊಲೀಸ್ ಆಗಿದ್ದು , ಅವರ ಹೆಸರು ಸುರೇಶ್ ಆಗಿರುತ್ತದೆ . ಸದರಿ ಶವಪಂಚನಾಮೆಯನ್ನು ನೋಡುತ್ತಿದ್ದು , ಅದನ್ನು ನಿಪಿ-2 ಎಂದು ಗುರುತಿಸಲಾಯಿತು .

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ರವರಿಂದಃ

1. ನಿಮ್ಮ ಸ್ನೇಹಿತ ನಿಮಗೆ ಕರೆ ಮಾಡಿ ಅಪಘಾತಾಗಿದೆ ಎನ್ನುವ ವಿಚಾರವನ್ನು ನಿಮಗೆ ತಿಳಿಸಲಿಲ್ಲ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ